ಬಂದೀನನ್ನೂದು ತಿಳೀಲಾರ್ದ ಒದ್ದಾಡ್ಲಿಕ್ ಹತ್ತೀನಿ ನೋಡ್ರಿ...' ನೊರೆಗಟ್ಟಿರುವ ನೋವನ್ನು ತೋಡಿಕೊಂಡು ಹಗುರವಾಗಬೇಕೆನಿಸಿತೇನೊ ನಿಜ. ಆದರೆ, ಹಾಗೆ ಹಾಗೆಲ್ಲ ತನ್ನ ಗೋಳಿನ ಕಥೆಯನ್ನು ಹೊರಗಿನವರೆದುರು ತೋಡಿಕೊಂಡರೆ ಪರಿಹಾರ ಸಿಕ್ಕೀತೆ? ತನ್ನ ಸಮಸ್ಯೆಗೆ ತಾನೇ ಅಲ್ಲವೆ ಪರಿಹಾರ ಕಂಡುಕೊಳ್ಳಬೇಕಾದವನು. ಅಂತೆನಿಸಿ, ಮರುಕ್ಷಣ.

'ಅಂಥಾದ್ದೇನಿಲ್ಲ ಸರ್, ಒಂದೀಟು ಸಣ್ಣಗೆ ಜ್ವರ, ಅಷ್ಟೆ' ಹುಸಿನಗೆಯೊಂದಿಗೆ ಸಮಜಾಯಿಸಲೆತ್ನಿಸಿದ.

'ಆದ್ರೂ, ದೇಸಾಯ್ರ ಈಗೀಗ ನೀವು ಮೊದ್ಲಿನಂಗಿಲ್ಲ ಬಿಡ್ರಿಯಪಾ. ಯಾವುದ್ಕೂ ಒಬ್ಬ ಎಕ್ಸ್‌ಪರ್ಟ್ ಡಾಕ್ಟರಿಗೆ ತೋರಿಸೊದು ಛಲೊ' ಪಾಟೀಲರು ಹಳೆಕಾಲದ ಮನುಷ್ಯ. ಅಂತಃಕರಣದಿಂದ ನುಡಿದರು.

'ಆಯ್ತರೀ ಸರ, ಹಂಗೇ ಮಾಡ್ತಿನಿ' ಎನ್ನುತ್ತ



ಅಲ್ಲಿಂದ ಹೊರಬಂದು, ಮನೆಯತ್ತ ಮುಖಮಾಡಿ ನಾಲ್ಕು ಹೆಜ್ಜೆಯನಿಟ್ಟದ್ದನೊ ಇಲ್ಲವೊ... ಮನೆಗೆ ಹೋಗಿ ಏನ್ಮಾಡೋದು, ಮತ್ತೇ ಮತ್ತೇ ಅವೇ ಮಾತುಗಳನ್ನು ಕೇಳುವುದು ಬೇಡವೆನಿಸಿತು. ಕಾಲೇಜ್ ಲೈಬ್ರರಿಯತ್ತ ಹೆಜ್ಜೆ ತಿರುಗಿಸಿದ. ಕೈಗೆ ಸಿಕ್ಕ ಯಾವುದೊ ಪುಸ್ತಕವೊಂದನ್ನು ಓದಲೆತ್ನಿಸಿದ. ಓದಿನಲ್ಲಿ ಒಳಗಾಗುವುದು ಅವನಿಗೆ ಸಾಧ್ಯವಾಗಲಿಲ್ಲ. ಛೇ! ಅಂದ್ಕೊಂಡ. ತಲೆಕೊಡವಿಕೊಂಡು ಅಲ್ಲಿಂದೆದ್ದು ಹೊರನಡೆದ. ತಲೆ ಅಂಬೋದು ಹುಳಿಮೊಸರಿನ ಗಡಿಗೆಯಂತಾಗಿತ್ತು.

* * *

'ಹೇಳು, ನಿನಗ ಆ ಧೈರ್ಯ ಇದೆಯಾ?' ಪದ್ಮಳ ಸವಾಲಿಗೆ ಯಾವ ಉತ್ತರ ಕೊಟ್ಟರೂ, ಅದರಿಂದ ಉದ್ಭವವಾಗುವ ಬಿರುಗಾಳಿಗೆ ಎದೆಗೊಟ್ಟು ನಿಲ್ಲುವ ಗಟ್ಟಿತನ ತನಗಿದೆಯೊ? ತನಗೆ ತಾನೇ ಪ್ರಶ್ನೆ ಹಾಕಿಕೊಂಡ. ಉತ್ತರ ಸಿಗದೆ ತಳಮಳಿಸಿದ. ಇಷ್ಟುವರ್ಷದ ಬಳಿಕ, ಅದೂ ತಾನು ಅವಳ ಬಾಳಿನಲ್ಲಿ ಪ್ರವೇಶಿಸಿದ ನಂತರ, ಈಗದು ಜರೂರಾಗಿ ಕಾಣಬೇಕೆ? ವ್ಯಾಕುಲಗೊಂಡ. ಇತ್ತ ಪದ್ಮ, ಮತ್ತವಳು ಹಾಕಿರುವ ಸವಾಲು ಕಾಡತೊಡಗಿದವು. ಒಂದು ಅಳತೆಯಲ್ಲಿದ್ದ ತಮ್ಮಿಬ್ಬರ ಸಂಬಂಧಕ್ಕೆ ಈಗ ತಮ್ಮ ಬಳಗದ ಒಪ್ಪಿಗೆಯ ಮುದ್ರೆ ಅವಶ್ಯವಿದೆ. ಸಾಮಾಜಿಕ ಸ್ತರ ವಿನ್ಯಾಸದಲ್ಲಿ ವಯಸ್ಸು, ಲಿಂಗ, ವೃತ್ತಿ ಪ್ರಮುಖವಾಗುತ್ತವೆ ಎಂಬ ಸಮಾಜಶಾಸ್ತ್ರಜ್ಞ ಕಿಂಗಸ್ಲೆ ಡೇವಿಸ್‌ನ ಮಾತುಗಳು ನೆನಪಿಗೆ ಬಂದು, ತನ್ನ ಕ್ರಿಯೆಗೆ ಸಮರ್ಥನೆ ಸಿಕ್ಕಂತೆ ಒಂದಿಷ್ಟು ಸಮಾಧಾನವಾಯಿತಾದರೂ, ತನ್ನ ಸಮಸ್ಯೆಗೆ ಅದೆಂತು ಪರಿಹಾರವಾದೀತು! ಒದ್ದಾಡಿದ. ಮನೆಯವರಿಂದಾಗಿ ಮನವೆಂಬುದು ತಿರುಗಣಿ ಮಡುವಾಗಿ ಬಿಟ್ಟಿದೆ. ಅವ್ವ ಮತ್ತು ಲಕ್ಷ್ಮಿಯ ಮೇಲೆ ಕೋಪಬಂತು. ತನ್ನನ್ನು ಹುಟ್ಟಿಸಿದ ಆ ಅಪ್ಪ ಭಿತ್ತಿಯಲ್ಲಿ ಮೂಡಿ, ಅಸಹ್ಯವಾಗಿ ಕಂಡ. ನೆನಪಿನ ಸೆಳವು ಎತ್ತೆತ್ತಲೊ ಕೊಚ್ಚಿಕೊಂಡು ಕರೆದೊಯ್ಯತೊಡಗಿತು.

* * *

'ಮನೆ ಅಂಬೋದು ಮಸಣವೇ ಆಗಿ ಹೋತು...' ವೆಂಕಜ್ಜಿ ಹಲುಬಿದ್ದೇ ಹಲುಬಿದ್ದು. ಅಪ್ಪನ ಹೆಸರೆತ್ತಿದರೆ ಸಾಕು, ಉರಿದುರಿದು ಬೀಳ್ತಿತ್ತು ಅಜ್ಜಿ. 'ದೇಶಗತಿ ಮನ್ತನಾ ನಮ್ದು! ಭರ್ಚಕ್ ಎರಡ್ನೂರೆಕ್ರೆ